International Journal of Kannada Research 2016; 2(4): 146-147



International Journal of Kannada Research
www.kannadajournal.com

ISSN: 2454–5813
IJSR 2016; 2(4): 146-147
© 2016 IJKS
www.kannadajournal.com
Received: 25-08-2016
Accepted: 26-09-2016

**ವಿಜಯಸಿಂಗ್ ಟಿ.ಎಂ**
ಸಂಶೋಧನಾ ವಿದ್ಯಾರ್ಥಿ ಸಂಸ್ಕೃತ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

Correspondence
**ವಿಜಯಸಿಂಗ್ ಟಿ.ಎಂ**
ಸಂಶೋಧನಾ ವಿದ್ಯಾರ್ಥಿ ಸಂಸ್ಕೃತ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

# ಶ್ರೀಮದ್ಭಗವದ್ಗೀತೆಯಲ್ಲಿ ನಿರೂಪಿತವಾದ ಕಾರ್ಯಸಿದ್ಧಿಯ ಅಗತ್ಯವಾದ ಅಂಶಗಳು

**ವಿಜಯಸಿಂಗ್ ಟಿ.ಎಂ**

**ಪೀಠಿಕೆ:**
ಪ್ರಪಂಚದ ಜೀವರಾಶಿಗಳ ಕಾರ್ಯವು ಭಗವಂತನ ನಾಮಸ್ಮರಣೆಯಿಂದಲೇ ಆರಂಭವಾಗುತ್ತದೆ. ನಿಸರ್ಗ, ಪಶು, ಪಕ್ಷಿ ಸಂಕುಲ, ಮಾನವರಿಗೆ, ಪ್ರಾಣಿಗಳಿಗೆ ಭಗವಂತನೇ ಆಧಾರಸ್ತಂಭನು. ಪ್ರಾತಃಕಾಲದಲ್ಲಿ ಉಷೆಯೊಂದಿಗೆ ಸೂರ್ಯನು ಕಾರ್ಯರಂಭ ಮಾಡುತ್ತಾನೆ. ಪ್ರತಿ ಜೀವ ಸಂಕುಲವು ಕಾರ್ಯ ಪ್ರವೃತ್ತವಾಗಲು ಮೂಡಣದಿಕ್ಕನ್ನು ತವಕದಿಂದ ಕಾಯುತ್ತಿರುತ್ತವೆ. ಸೂರ್ಯದರ್ಶನ ಪಡೆದ ಅನೇಕ ಜೀವಿಗಳು, ಮಾನವರು ತಮ್ಮ ಉದರ ಪೋಷಣೆಗಾಗಿ ಕಾರ್ಯ ಪ್ರವೃತ್ತವಾಗುತ್ತವೆ. ಸದಾ ಭಗವಂತನನ್ನು ಸ್ಮರಿಸಿ, ಎಲ್ಲವೂ ಅವನಿಂದಲೇ ಉಂಟಾಗಿರುವುದೆಂದು ಅರಿತು, ಮಾನವನು ಕಾರ್ಯಗಳನ್ನು ಮಾಡುತ್ತ ನೂರು ವರ್ಷ ಬಾಳಬೇಕು. ಆದ್ದರಿಂದ ಹೀಗೆ ಜೀವಿಯು ತನ್ನ ಜೀವನವನ್ನು ಉತ್ತಮಗೊಳಿಸಿ ಮುಕ್ತಿ ಪಡೆಯಲು ಸಾಧ್ಯವಾಗುತ್ತದೆ. ತನ್ನ ಜೀವನವನ್ನು ಉತ್ತಮಗೊಳಿಸಲು ಏನು ಮಾಡಬೇಕು? ಒಳ್ಳೆಯ ಕಾರ್ಯ ಮಾಡಬೇಕು. ಕಾರ್ಯವು ಕೈಗೂಡಿದಾಗ ಮಾನವನು ಕೀರ್ತಿ ಗಳಿಸುತ್ತಾನೆ. ಮಾನವನು ಕೀರ್ತಿ ಗಳಿಸುವ ಕರ್ಮ ಅಥವಾ ಕರ್ಮಯೋಗದ ಸಿದ್ಧಾಂತ ಮತ್ತು ಕಾರ್ಯಸಿದ್ಧಿಯ ಅಂಶಗಳನ್ನು ಭಗವಂತನಾದ ಶ್ರೀಕೃಷ್ಣನು ಅರ್ಜುನನನ್ನು ನಿಮಿತ್ತ್ಯ ಮಾಡಿಕೊಂಡು ಶ್ರೀಮದ್ಭಗವದ್ಗೀತೆಯಲ್ಲಿ ಹೇಳಿದ್ದಾನೆ.

ಪಂಚೈತಾನಿ ಮಹಾಬಾಹೋ ಕಾರಣಾನಿ ನಿಬೋಧ ಮೇ ।
ಸಾಂಖ್ಯೇ ಕೃತಾಂತೇ ಪ್ರೋಕ್ತಾನಿ ಸಿದ್ಧಯೇ ಸರ್ವ ಕರ್ಮಣಾಮ್ ॥
(ಗೀ : ೧೮ : ೧೩)

ಅರ್ಜುನ, ಕಾರ್ಯಸಿದ್ಧಿಗಾಗಿ ಈ ಐದು ಕಾರಣಗಳನ್ನು ಸಾಂಖ್ಯಶಾಸ್ತ್ರದಲ್ಲಿ ಉಲ್ಲೇಖಿತವಾಗಿದೆ. ಅದನ್ನು ನನ್ನಿಂದ ತಿಳಿದು ಕೊ.

ಅರ್ಜುನನಿಗೆ ಅಜ್ಜ, ಗುರು, ಶತ್ರು ಪಕ್ಷದವರನ್ನು ಹನನ ಮಾಡಬೇಕೆಂಬುದೇ ಸಮಸ್ಯೆಯಾಗಿರುವುದು. ಈ ಸಮಸ್ಯೆಗೆ ಸರಳ ಪರಿಹಾರವನ್ನು ಭಗವಂತನು ಹೇಳುತ್ತಾನೆ. ಯುದ್ಧ ಎನ್ನುವುದು ಕರ್ಮ, ಈ ಕರ್ಮ ಮಾಡಲು ವೇದಾಂತದ ಕರ್ಮ ಸಿದ್ಧಾಂತ ಇವನಿಗೆ ಬೇಕಾಗಿರುವುದು. ಇವನಿಗಷ್ಟೇ ಅಲ್ಲ, ಜಗತ್ತಿನ ಯಾವುದೇ ಜೀವಿಗೂ ಬೇಕಾಗಿರುವುದು ಇದೇ. ಪ್ರಪಂಚ ಎನ್ನುವುದು ಕರ್ಮದ ಭೂಮಿಯಾಗಿದೆ. ಇಲ್ಲಿಯೇ ನಮ್ಮ ಬಂಧನವು ಕರ್ಮದಿಂದಾಗಿರುವುದು. ಈ ಬಂಧನವೇ ನಾನು, ನನ್ನದು ಎನ್ನುವ ಕುಟುಂಬ. ಈ ಎಲ್ಲಕ್ಕೂ ಮೂಲವಾದುದು ಕರ್ಮ ಬಂಧನ. ಇದರಿಂದ ಮುಕ್ತರಾದರೆ ಆಗಲೇ ಬಿಡುಗಡೆ ಲಭಿಸುವುದು. ಕರ್ಮದ ಪರಿಣಾಮಕ್ಕೆ ನಾನೇ ಕಾರಣನೆಂದು ಆಶಿಸುವುದು ನ್ಯಾಯವೇ ಆಗಿದೆ. ಅದಕ್ಕೆ ಐದು ಕಾರಣಗಳುಂಟು. ಇವು ಐದು ಕಾರಣಗಳು ಇದ್ದಾಗ ಮಾತ್ರ ಕರ್ಮ ಕೈಗೂಡುವುದು. ಇವು ಐದರಲ್ಲಿ ಒಂದೂ ಇರದಿದ್ದಾಗ ಕಾರ್ಯ ಕೈಗೂಡಲಾರದು. ಇಲ್ಲಿ ಕರ್ಮಗಳ ಸಿದ್ಧಿ ಎಂದರೆ ಕಾರ್ಯದ ಮೂಲಕವಾಗಿ ನಾವು ಇಚ್ಛಿಸುವ ಫಲಪ್ರಾಪ್ತಿ.

ಈ ಶ್ಲೋಕಕ್ಕೆ ಶ್ರೀಶಂಕರಾಚಾರ್ಯರು ಈ ರೀತಿ ಹೇಳಿದ್ದಾರೆ :

ಮುಂದೆ ಹೇಳುವ ವಿಷಯದಲ್ಲಿ ಚಿತ್ತವನ್ನು ನೆಲೆಸುವಂತೆ ಮಾಡಲು ಕಾರ್ಯದ ಐದು ಕಾರಣಗಳನ್ನು ನನ್ನ ವಚನದ ಮೂಲಕವಾಗಿ ತಿಳಿದು ಕೋ ಎಂದು ಹೇಳುತ್ತಾನೆ ಮತ್ತು ಅವುಗಳನ್ನು

ಅರಿಯಬೇಕಾಗಿರುವುದರಿಂದ ಹೀಗೆ ಹೊಗಳುತ್ತಾನೆ. ಸಾಂಖ್ಯದಲ್ಲಿ ತಿಳಿದುಕೊಳ್ಳಬೇಕಾದ ಪದಾರ್ಥಗಳನ್ನು ಯಾವ ಶಾಸ್ತ್ರದಲ್ಲಿ ಹೇಳಿದೆಯೋ ಅದು ಸಾಂಖ್ಯವಾಗಿದೆ. ಕೃತವೆಂಬ ಮಾತಿನ ಮೂಲಕ ಕರ್ಮವನ್ನು ತಿಳಿಸಿದೆ. ಇದರ ಅಂತಿಮವು ಯಾವುದರಲ್ಲಿ ಕೊನೆಯಾಗುವುದೋ ಅದೇ ಕೃತಾಂತವಾಗಿದೆ.

ಈ ಶ್ಲೋಕಕ್ಕೆ ಶ್ರೀರಾಮಾನುಜಾಚಾರ್ಯರು ಈ ರೀತಿ ಹೇಳಿದ್ದಾರೆ : ವೈದಿಕವಾದ ಬುದ್ಧಿಯಿಂದ ಕೂಡಿದ ವಿಚಾರದಲ್ಲಿ ಸರ್ವ ಕಾರ್ಯದ ಉತ್ಪತ್ತಿಗೆ ಐದು ಕಾರಣಗಳನ್ನು ಭಗವಂತನಿಂದ ತಿಳಿದುಕೊಂಡು ಅನುಸಂಧಾನ ಮಾಡುವವನಾಗು. ಈ ಬುದ್ಧಿಯು ಶರೀರ, ಇಂದ್ರಿಯ, ಪ್ರಾಣ ಜೀವಾತ್ಮವೇ ಸಾಧನವಾದ ಪರಮಾತ್ಮನನ್ನೇ ಕರ್ತಾ ಎಂದು ತಿಳಿಯಬೇಕು.

ಶ್ರೀಮಧ್ವಾಚಾರ್ಯರು ಈ ಶ್ಲೋಕಕ್ಕೆ ಈ ರೀತಿ ಹೇಳಿದ್ದಾರೆ : ಒಂದು ಕಾರ್ಯಾರಂಭಕ್ಕೆ ಅಗತ್ಯವಾದ ಕಾರಣಗಳನ್ನು ಇಲ್ಲಿ ಹೇಳಲಾಗಿದೆ. ಬ್ರಹ್ಮ ಜ್ಞಾನ ಸಾಧನವಾದ ಶಾಸ್ತ್ರದಲ್ಲಿ ಎಂದರ್ಥವನ್ನು ಹೇಳಿದ್ದಾರೆ.

ಅಧಿಷ್ಠಾನಂ ತಥಾ ಕರ್ತಾ ಕರಣಂ ಚ ಪೃಥಗ್ವಿಧಮ್ ।
ವಿವಿಧಾಶ್ಚ ಪೃಥಕ್ಚೇಷ್ಟಾ ದೈವಂ ಚೈವಾತ್ರ ಪಂಚಮಮ್ ॥
(ಗೀ : ೧೮ : ೧೪)

ಅಧಿಷ್ಠಾನ, ಕರ್ತೃ, ಅನೇಕ ಬಗೆಯ ಉಪಕರಣ, ವಿವಿಧ ಅನ್ಯ ಕಾರ್ಯಗಳು ಮತ್ತು ದೈವವು ಹೀಗೆ ಐದನೆಯದು.

ಒಂದು ಕಾರ್ಯ ಯಶಸ್ವಿಯಾಗಬೇಕಾದರೆ ಅದಕ್ಕೆ ಮುಖ್ಯವಾಗಿ ಈ ಐದು ಒಟ್ಟಾಗಿರಬೇಕು. ಒಂದು ಮೂರ್ತಿ ಕೆತ್ತನೆ ಮಾಡಬೇಕಾದರೆ ಒಂದು ಕಲ್ಲು ಅದಕ್ಕೆ ಅಧಿಷ್ಠಾನ. ಎರಡನೆಯವನು ಅದನ್ನು ಕೆತ್ತನೆ ಮಾಡುವವನು. ಮೂರನೆಯದು ಇತರ ಸಲಕರಣೆಗಳು. ನಾಲ್ಕನೆಯದು ಅದಕ್ಕೆ ಸಂಬಂಧಿಸಿದ ವಿವಿಧ ಕ್ರಿಯೆಗಳು, ದೈವ ಐದನೆಯದು. ಇದರ ಸಹಾಯವಿಲ್ಲದೆ ನಾವು ಏನು ಮಾಡಿದರೂ ಸಾಧ್ಯವಾಗದು.

ಶರೀರ ವಾಙ್ಮನೋಭಿರ್ಯತ್ಕರ್ಮ ಪ್ರಾರಭತೇ ನರಃ ।
ನ್ಯಾಯ್ಯಂ ವಾ ವಿಪರೀತಂ ವಾ ಪಂಚೈತೇ ತಸ್ಯ ಹೇತವಃ ॥
(ಗೀ : ೧೮ : ೧೫)

ಮಾನವನು ದೇಹ, ಮಾತು, ಮನಸ್ಸುಗಳಿಂದ ನ್ಯಾಯ ರೀತಿಯಿಂದಾಗಲಿ, ವಿಪರೀತವಾಗಲಿ ಯಾವ ಕಾರ್ಯವನ್ನು ಆರಂಭ ಮಾಡುತ್ತಾನೆಯೋ ಅಂತಹ ಕಾರ್ಯಕ್ಕೆ ಈ ಐದು ಕಾರಣಗಳೆನಿಸುತ್ತವೆ.

ಮಾನವನು ವ್ಯವಹಾರಿಕ ಜೀವನದಲ್ಲಿ ನ್ಯಾಯ ಸಮ್ಮತವಾದ, ನ್ಯಾಯ ಸಮ್ಮತವಲ್ಲದ ಕರ್ಮಗಳನ್ನು ಕಾಣುತ್ತೇವೆ. ಶುದ್ಧ ಮನಸ್ಸಿನಿಂದ ಮಾಡಿದ ಕರ್ಮಗಳನ್ನು ನ್ಯಾಯ ಸಮ್ಮತವಾದವುಗಳೆಂದು, ಇದಕ್ಕೆ ವಿಪರೀತವಾದ ಹಿಂಸಾದಿ ಕರ್ಮ ಮಾಡುವುದು ನ್ಯಾಯಸಮ್ಮತವಲ್ಲದವುಗಳಾಗಿವೆ. ಏನೇ ಆಗಲಿ ಈ ಎರಡು ಕಾರ್ಯಕ್ಕೂ ಈ ಐದು ಅಂಶಗಳು ಕಾರಣಗಳೆನಿಸಿವೆ.

ಜ್ಞಾನಂ ಜ್ಞೇಯಂ ಪರಿಜ್ಞಾತಾ ತ್ರಿವಿಧಾ ಕರ್ಮಚೋದನಾ ।
ಕರಣಂ ಕರ್ಮ ಕರ್ತೇತಿ ತ್ರಿವಿಧಃ ಕರ್ಮ ಸಂಗ್ರಹಃ ॥
(ಗೀ : ೧೮ : ೧೮)

ಅರಿಯುವುದು, ಅರಿಯಲ್ಪಡಬೇಕಾದುದು, ಅರಿಯುವವನು ಎಂದು ಕರ್ಮ ಪ್ರಚೋದನೆಯು ಮೂರು ವಿಧ.

ಜೀವಿಯ ಕಾರ್ಯ ನಡೆಯಬೇಕಾದರೆ ಜ್ಞಾನ, ಜ್ಞೇಯ, ಜ್ಞಾತೃ – ಈ ಮೂರು ಕಾರ್ಯದ ಪ್ರಚೋದನೆಗಳೆಂದು ಭಗವಂತನು ಗೀತೆಯಲ್ಲಿ ತಿಳಿಸಿದ್ದಾನೆ. ಉದಾಹರಣೆಯ ಮೂಲಕ ಇದನ್ನು ಅರಿತುಕೊಳ್ಳಬಹುದು. ಒಂದು ದೂರದ ಊರಿನ ಕಾರ್ಯಕ್ರಮಕ್ಕೆ ಹೋಗಬೇಕಾದ ಅನಿವಾರ್ಯವಿರುತ್ತದೆ. ಅದಕ್ಕೆ ಸಾಕಷ್ಟು ಸಿದ್ಧತೆ ಬೇಕಾಗುತ್ತದೆ. ಊರಿನ ಪರಿಚಯವಿಲ್ಲ. ಆ ಊರಿನ ವಿಳಾಸವನ್ನು ಇತರರಿಂದ ಅರಿತುಕೊಳ್ಳುವುದೇ ಜ್ಞೇಯ. ಅದನ್ನು ಅರಿಯುವವನೇ ಜ್ಞಾತೃ. ಅದರ ವಿಷಯವನ್ನು ಅರಿತುಕೊಳ್ಳುವುದೇ ಜ್ಞಾನ.

ಈ ಮೂರು ಕರ್ಮ ಪ್ರಚೋದನೆಯಿಂದಾಗಿ ಕರ್ಮ ಸಂಗ್ರಹವಾಗುತ್ತದೆ. ಈ ಕರ್ಮ ಸಂಗ್ರಹಕ್ಕೂ ಮೂರು ಅಂಶಗಳು ಅಗತ್ಯವಾಗಿವೆ. ಅವುಗಳೆಂದರೆ ಕರಣ, ಕರ್ಮ, ಕರ್ತೃ, ಕರಣ ಎಂಬುದು ಮನಸ್ಸು. ಒಬ್ಬ ವ್ಯಕ್ತಿ ಕಷ್ಟದಲ್ಲಿದ್ದಾಗ ಅವನಿಗೆ ಇನ್ನೊಬ್ಬನು ಸಹಾಯ ಮಾಡುತ್ತಾನೆ. ಈ ಸಹಾಯವನ್ನು ಪಡೆದ ವ್ಯಕ್ತಿಯ ಮನಸ್ಸಿನಲ್ಲಿ ಆ ವ್ಯಕ್ತಿಯ ಬಗ್ಗೆ ಕೃತಜ್ಞತಾ ಭಾವದಿಂದ ಏನಾದರೂ ಮಾಡಬೇಕೆನಿಸುತ್ತದೆ. ಹಾಗೆ ಮಾಡುವವನೇ ಕರ್ತೃ. ಸಹಾಯ ಪಡೆದುದರ ಫಲವಾಗಿ ಪ್ರತ್ಯುಪಕಾರದ ಕರ್ಮ ಅವನಲ್ಲಿ ಬಂದು ಬಿಡುತ್ತದೆ. ಇದರಲ್ಲಿ ಒಂದು ಅಂಶ ಇಲ್ಲದಿದ್ದರೂ ಕರ್ಮ ಸಂಗ್ರಹವಾಗಲಾರದು.

ಹೀಗೆ ಕರ್ಮಸಿದ್ಧಿಗೆ ಜ್ಞಾನ, ಜ್ಞೇಯ, ಜ್ಞಾತೃ ಎಂಬ ಮೂರು ಕರ್ಮ ಪ್ರಚೋದನೆಗಳು. ಕರಣ, ಕರ್ಮ, ಕರ್ತೃ ಎಂಬ ಮೂರು ಕರ್ಮಸಂಗ್ರಹಗಳು ಅಗತ್ಯವಾಗಿವೆ.